ವಿಶ್ವವಾಣಿ

## ಸಂಪಾದಕೀಯ

# ಶೈಕ್ಷಣಿಕ ಕ್ಷೇತ್ರ ಆರಂಭಿಸಲು ಸಕಾಲ

ಕರೋನಾ ಎರಡನೇ ಅಲೆಯು ಸಂಪೂರ್ಣ ನಿಯಂತ್ರಣಕ್ಕೆ ಬಂದಿರುವ ಬೆನ್ನಲ್ಲೇ ದೇಶದಲ್ಲಿ ಪದವಿ ಕಾಲೇಜುಗಳನ್ನು ಆರಂಭಿಸಲು ಸರಕಾರಗಳು ಸಿದ್ಧತೆ ನಡೆಸಿಕೊಂಡಿವೆ. ಕರ್ನಾಟಕದಲ್ಲಿಯೂ ಜುಲೈ 26ರಿಂದ ಪದವಿ ಕಾಲೇಜು ಆರಂಭಿಸುವುದಾಗಿ ಸರಕಾರ ಹೇಳಿದೆ.



ಸೋಂಕು ನಿಯಂತ್ರಣಕ್ಕೆ ಬರುವುದರೊಂದಿಗೆ ವಿದ್ಯಾರ್ಥಿಗಳಿಗೆ ಲಸಿಕೆ ನೀಡುತ್ತಿರುವ ಈ ಸಮಯದಲ್ಲಿ ಶೈಕ್ಷಣಿಕ ಕ್ಷೇತ್ರವನ್ನು ಆರಂಭಿಸುವುದು ಸೂಕ್ತ. ಆನ್‌ಲೈನ್ ಶಿಕ್ಷಣವನ್ನು ನೆಚ್ಚಿಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ಪಠ್ಯ ಅರ್ಥವಾಗುವುದಿಲ್ಲ. ಅದರಲ್ಲಿಯೂ ವಿಜ್ಞಾನ ಹಿನ್ನಲೆಯಿರುವ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಆಫ್‌ಲೈನ್ ತರಗತಿ ಅನಿವಾರ್ಯ. ಆದ್ದರಿಂದ ಸೋಂಕು ನಿಯಂತ್ರಣಕ್ಕೆ ಬರುತ್ತಿರುವಾಗಲೇ ಆರಂಭಿ ಸುವುದು ಸೂಕ್ತ ನಿರ್ಧಾರ.

ಇನ್ನು ಈಗಾಗಲೇ ಏಮ್ಸ್ ಸೇರಿದಂತೆ ಹಲವು ಸಂಸ್ಥೆಗಳು ಪ್ರಾಥಮಿಕ ಶಾಲೆಗಳನ್ನು ಆರಂಭಿಸುವುದಕ್ಕೆ ಒಪ್ಪಿಗೆ ನೀಡಿರುವುದರಿಂದ, ಹಂತ ಹಂತವಾಗಿ ಶಾಲೆಗಳನ್ನು ಆರಂಭಿಸುವುದು ಸೂಕ್ತ. ಮಕ್ಕಳಿಗೆ ಕರೋನಾ ನಿಯಂತ್ರಣಕ್ಕೆ ತಗೆದುಕೊಳ್ಳಬೇಕಾದ ಅಗತ್ಯ ಕ್ರಮಗಳೊಂದಿಗೆ ಶಾಲೆಗಳನ್ನು ಆರಂಭಿಸುವುದಕ್ಕೆ ಸಿದ್ಧತೆ ನಡೆಸಿಕೊ ಳ್ಳಬೇಕಿದೆ. ಗ್ರಾಮೀಣ ಭಾಗದಲ್ಲಿ ಈಗಾಗಲೇ ಸುಮಾರು ಎರಡು ವರ್ಷಗಳಿಂದ ಶಾಲೆಗಳು ತೆರೆಯದೇ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಮಸ್ಯೆ ಎದುರಾಗಿದೆ. ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಇದರೊಂದಿಗೆ ಮಕ್ಕಳಿಗೆ ಸರಿಯಾದ ಪೌಷ್ಠಿಕಾಂಶದ ಆಹಾರವೂ ಸಿಗುತ್ತಿಲ್ಲ. ಆದ್ದರಿಂದ ಶಾಲೆಗಳನ್ನು ಆರಂಭಿಸುವುದು ಸೂಕ್ತ ಎನ್ನುವ ಮಾತುಗಳನ್ನು ತಜ್ಞರು ಹೇಳುತ್ತಿದ್ದಾರೆ. ಮೂರನೇ ಅಲೆಯ ಆತಂಕದಲ್ಲಿಯೂ ಅರ್ಹರಿಗೆ ಲಸಿಕೆ ನೀಡುವ ಮೂಲಕ, ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದೆ. ಆದ್ದರಿಂದ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಲಸಿಕೆಯನ್ನು ಇನ್ನಷ್ಟು ವೇಗವಾಗಿ ಜನರಿಗೆ ನೀಡುವ ನಿಟ್ಟಿನಲ್ಲಿ ಕ್ರಮವಹಿಸಬೇಕಿದೆ.

## ಸೊಂಪಾದಕೀಯ

# ಒಂದು ಮೊಟ್ಟೆಯ ಕಥೆ

ಕೋಳಿ ಫಾರ್ಮ್‌ಗಳಲ್ಲಿ ಮುಖ್ಯವಾಗಿ ಕೋಳಿ ಸಾಕುವುದೇ ಮೊಟ್ಟೆಗಾಗಿ. ಆದರೆ ಅಲ್ಲಿನ ಕೋಳಿಗಳು ಮೊಟ್ಟೆಯನ್ನೇ ಇಡದಿದ್ದರೆ? ಇಂಥ ಪ್ರಕರಣ ಪುಣೆ ಬಳಿಯ ಪೌಲ್ಟ್ರಿ ಫಾರ್ಮ್‌ನಲ್ಲಿ ನಡೆದಿದೆಯಂತೆ. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ' ಎಂಬ ದಾಸರ ಪದ, ಇವರ ಮಟ್ಟಿಗೆ 'ಎಲ್ಲಾರು ಮಾಡುವುದು ಮೊಟ್ಟೆಗಾಗಿ .. ಎಂದು ಬಹುಶಃ ಬದಲಾಗಿರುತ್ತದೆ. ಆದರೆ ಮೊಟ್ಟೆಗಳೇ ಸಿಗದೆ ಮಾಲೀಕರ ಹೊಟ್ಟೆ ಮೇಲೆ ಹೊಡೆದಂಗೆ ಆಗಿದೆ. ಪ್ರಕರಣ ಈಗ ಪೊಲೀಸ್ ಠಾಣೆಯ ಮೆಟ್ಟಿಲೇರಿದೆ. ಪೊಲೀಸರು ದೂರು ದಾಖಲಿಸಿಕೊಂಡು ವಿಚಾರಿಸಿದಾಗ ಗೊತ್ತಾದ ವಿಷಯ ನೋಡಿ ಎಲ್ಲರೂ ಬೆಚ್ಚಿಬಿದ್ದರಂತೆ.

ಕೋಳಿಗೆ ಆಹಾರ ತಯಾರಿಸುವ ಕೆಲವು ಕಂಪನಿಗಳಿಂದ ತಂದು ಅವುಗಳಿಗೆ ನೀಡಲಾಗುತ್ತದೆ. ಆದರೆ ಒಂದು ನಿರ್ದಿಷ್ಟ ಕಂಪನಿಯ ಆಹಾರವನ್ನು ನೀಡಿದಾಗಿನಿಂದ ಕೋಳಿಗಳು ಮೊಟ್ಟೆ ಇಡುತ್ತಿಲ್ಲವಂತೆ. ಇನ್ನೂ ಕೆಲವು ಫಾರ್ಮ್‌ಗಳಿಗೂ ಇದೇ ಅನುಭವ ಆಗಿದೆಯಂತೆ. ಇವರೇನು ಮೊಟ್ಟೆ ಇಡಲು ಆಹಾರ ಕೊಟ್ಟರೋ ಅಥವಾ ಇಡದಿರುವಂತೆ ಮಾಡಲೋ ಎಂದು ಎಲ್ಲರೂ ಕೇಳುತ್ತಿದ್ದಾರೆ. ಮನುಷ್ಯರಲ್ಲೂ ಇಂಥ ಕೆಲವು ಸಮಸ್ಯೆ ಆಗಿರುವುದುಂಟು. ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯನ್ನೋ, ಮತ್ತಾವುದೋ ಚಿಕಿತ್ಸೆಯನ್ನು ಪಡೆದ ಬಳಿಕವೂ ಮಕ್ಕಳಾದ ಅನುಭವ ಬೇಕಾದಷ್ಟು ಜನರಿಗೆ ಆಗಿವೆ. ಆದರೆ ಇನ್ನು ಕೆಲವರು ಮಕ್ಕಳಾಗಿಲ್ಲವೆಂದು ಚಿಕಿತ್ಸೆ ಪಡೆಯುವುದುಂಟು. ಅವರಿಗೆ ಆ ನಿಟ್ಟಿನಲ್ಲಿ ಚಿಕಿತ್ಸೆ ನೀಡುವ ಬದಲು ಕಾಯಂ ಆಗಿ ಮಕ್ಕಳಾಗದಂತೆ ಏನಾದರೂ ಚಿಕಿತ್ಸೆ ನೀಡಿಬಿಟ್ಟರೆ ಏನು ಗತಿ? ಹಾಗೆಯೇ ಕೋಳಿಗಳು ಹೆಚ್ಚಿನ ಮೊಟ್ಟೆ ಇಡಲೆಂದು ಯಾವುದಾದರೂ ಪೌಷ್ಟಿಕ ಆಹಾರ ಕೊಟ್ಟರೆ ಹೆಚ್ಚಿನ ಮೊಟ್ಟೆ ಇಡುವುದಿರಲಿ, ಮೊಟ್ಟೆಯನ್ನೆ ಕೊಡದಿದ್ದರೆ ಏನು ಮಾಡಲಾದೀತು. ಈ ಆಹಾರ ಕೊಟ್ಟು ಕೆಟ್ಟೆ ಎಂದು ಹೇಳಿ ಕೈಕಟ್ಟಿ ಕುಳಿತುಕೊಳ್ಳಬೇಕಷ್ಟೆ. ಏನೇ ಆಗಲಿ, ಈ ಕಂಪನಿಯವರು ಕೋಳಿ ಫಾರ್ಮ್ ಗಳ ತಲೆಯ ಮೇಲೆ ಸರಿಯಾಗಿ ಮೊಟ್ಟೆ ಒಡೆದಿದ್ದಾರೆ. ಆದರೂ ಹೀಗೆ 'ಎಗ್'ಇಲ್ಲದೆ ಮೋಸ ಮಾಡುವುದುಂಟೆ ಎಂದು ಪೌಲ್ಟ್ರಿಯವರು ಕೇಳುತ್ತಿದ್ದಾರೆ. ಸದ್ಯಕ್ಕೆ, ಸಂತ್ರಸ್ತರಿಗೆ ಪರಿಹಾರ ನೀಡುವುದಾಗಿ ತಿಳಿಸಿದ್ದಾರಂತೆ. ಇದೇ ಎಳೆ ಯನ್ನು ಆಧರಿಸಿ, 'ಒಂದು ಮೊಟ್ಟೆಯ ಕಥೆ ಪಾರ್ಟ್2' ಸಿನಿಮಾ ಮಾಡಬಹುದೇನೊ.

## ಸಂಪಾದಕರ ಸದ್ಯಶೋಧನೆ

# ಕವಿಯ ಮಹತ್ವ ಅರಿವಾಗುವುದು ಹೇಗೆ ?

ನಮ್ಮಲ್ಲಿ ಒಬ್ಬ ವ್ಯಕ್ತಿಯ ಹೆಸರನ್ನು ಒಂದು ನಗರಕ್ಕಿಡುವ ಸಂಪ್ರದಾಯ ವಿರಳ. ಒಂದು ನಗರದಲ್ಲಿರುವ ಪ್ರದೇಶಕ್ಕೆ, ಬೀದಿಗೆ, ರಸ್ತೆಗೆ ಇಡುತ್ತೇವೆ. ಆದರೆ ಇಡೀ ನಗರಕ್ಕೆ ಇಡುವುದು ಕಡಿಮೆಯೇ. ಇದಕ್ಕೆ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ ಅಪವಾದಗಳಿವೆ. ಅದರಲ್ಲೂ ಒಬ್ಬ ವ್ಯಕ್ತಿಯ ಹೆಸರನ್ನು ಒಂದಕ್ಕಿಂತ ಹೆಚ್ಚು ನಗರಗಳಿಗೆ ಇಡುವುದಿಲ್ಲ. ನಮ್ಮಲ್ಲಿ ನೆಹರು, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಅವರ ಹೆಸರುಗಳಲ್ಲಿ ನೂರಾರು ಸಂಸ್ಥೆ, ವಿಮಾನ ನಿಲ್ದಾಣ, ರಸ್ತೆಗಳಿವೆ. ಅವರೆಲ್ಲ ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದವರು. ಆದರೆ ನಮ್ಮ ದೇಶದಲ್ಲಿ ಒಬ್ಬ ಕವಿ, ಸಾಹಿತಿ, ಕಾದಂಬರಿಕಾರರ ಹೆಸರುಗಳನ್ನೆಲ್ಲ ನಗರಕ್ಕೋ, ಊರಿಗೋ ಇಟ್ಟ ನಿದರ್ಶನಗಳು ಕಡಿಮೆ. ವರಕವಿ ದ.ರಾ.ಬೇಂದ್ರೆ ಅವರ ಹೆಸರನ್ನು ಬಸ್ಸಿನ ಬೋರ್ಡಿನಲ್ಲಿ ಮಾತ್ರ ಬೇಂದ್ರೆನಗರ (ಧಾರವಾಡ) ಎಂದು ನಾಮಕರಣ ಮಾಡಿದ್ದೇವೆ. ಮೈಸೂರಿನಲ್ಲಿ ಕುವೆಂಪುನಗರ ಎಂಬ ಬಡಾವಣೆ ಇದೆ. ಆದರೆ ಇಡೀ ನಗರವನ್ನು ನಾವು ಯಾವ ಕವಿ ಅಥವಾ ಸಾಹಿತಿ ಹೆಸರಿಗೆ ಮುಡಿಪಾಗಿಟ್ಟಿಲ್ಲ. ಕೆಲವು ವರ್ಷಗಳ ಹಿಂದೆ ನಾನು ರಷ್ಯಾಕ್ಕೆ ಹೋದಾಗ ಸ್ನೇಹಿತರೊಬ್ಬರು ನನ್ನನ್ನು ಪುಷ್ಕಿನ್ ಸ್ಮಾರಕಕ್ಕೆ ಕರೆದುಕೊಂಡು ಹೋಗಿದ್ದರು. ರಷ್ಯಾದ ಪ್ರಮುಖ ಪ್ರದೇಶದಲ್ಲಿ ನಿಲ್ಲಿಸಿರುವ ವಿಗ್ರಹವನ್ನು ನೋಡಲು ಪ್ರತಿದಿನ ಸಾವಿರಾರು ಜನ ಬರುತ್ತಾರೆ. ಆ ಭವ್ಯ ವಿಗ್ರಹ ಮತ್ತು ಸುತ್ತಲಿನ ಪ್ರದೇಶ ಗಮನಿಸಿದರೆ, ಅವರು ಮಹಾನ್ ವ್ಯಕ್ತಿಯಾಗಿರಬಹುದು ಎಂದು ತಟ್ಟನೆ ತೀರ್ಮಾನಿಸಬಹುದು. ರಷ್ಯನ್‌ರ ಪಾಲಿಗೆ ಅವರು ಮಹಾನ್ ವ್ಯಕ್ತಿಯೇ. ಅಂಥ ವ್ಯಕ್ತಿ ನಮ್ಮಲ್ಲಿ ಇದ್ದಿದ್ದರೆ ನಾವು ಅವರಿಗೆ ಅದೇ ರೀತಿಯ ಮರ್ಯಾದೆ, ಮಹತ್ವ ಕೊಡುತ್ತಿದ್ದೆವಾ ಎಂಬುದು ಪ್ರಶ್ನೆ. ಅನಂತರ ನಾನು ರಷ್ಯಾದ ಅನೇಕ ಊರುಗಳಿಗೆ ಹೋದಾಗ, ಸಾಮಾನ್ಯವಾಗಿ ಎಲ್ಲೆಡೆ ಅಲ್ಲಿನ ಕವಿಗಳ ಮತ್ತು ಸಾಹಿತಿಗಳ ಹೆಸರಿನಲ್ಲಿರುವ ಊರುಗಳನ್ನು ನೋಡಿ ಅಲ್ಲಿನ ಜನರಿಗೆ ಸಾರಸ್ವತಲೋಕದ ಅಕ್ಷರ ಜೀವಿಗಳ ಬಗೆಗಿರುವ ಗೌರವ ಮತ್ತು ಪ್ರೀತಿ ಕಂಡು ಅಭಿಮಾನವೆನಿಸಿತು. ಪುಷ್ಕಿನ್, ದಾಸ್ತೋವಸ್ಕಿ, ಚೆಕೋವ್, ಮಾರ್ಕ್ಸಿಮ್ ಗಾರ್ಕಿ, ಟಾಲ್‌ಸ್ಟಾಯ್ ಮುಂತಾದವರ ಹೆಸರಿನಲ್ಲಿ ಹತ್ತಾರು ಊರುಗಳಿರುವುದನ್ನು ನೋಡಿ ಅಚ್ಚರಿಯೆನಿಸಿತು. ರಷ್ಯನ್‌ರಿಗೆ ತಮ್ಮ ಸಾಹಿತಿ, ಕವಿ, ಲೇಖಕರನ್ನು ಕಂಡರೆ ಅಂಥ ಅಭಿಮಾನ ! ರಷ್ಯಾದಲ್ಲಿ ಅಲೆಕ್ಸಾಂಡರ್ ಸೆರ್ಗೆಯೆವಿಚ್ ಪುಷ್ಕಿನ್ ಬಗ್ಗೆ ವಿಶೇಷ ಮಮತೆ, ಪ್ರೀತಿ, ಮರ್ಯಾದೆ. ಕೇವಲ ಮೂವತ್ತೆಂಟು ವರ್ಷಗಳ ಕಾಲ ಬದುಕಿದ್ದ (1799 – 1837) ಪುಷ್ಕಿನ್ ರಷ್ಯಾ ಜನಮಾನಸವನ್ನು ಆವರಿಸಿದ ಪರಿ ಮಾತ್ರ ಇಂದಿಗೂ ವಿಸ್ಮಯ ಹುಟ್ಟಿಸುವಂಥದ್ದು. ಕವಿ, ಕಾದಂಬರಿಕಾರ, ನಾಟಕಕಾರನಾಗಿದ್ದ ಪುಷ್ಕಿನ್, ಹೊಸ ಅಲೆಯ ಸಾಹಿತ್ಯವನ್ನೇ ಸೃಷ್ಟಿಸಿದ ಸೃಜನಶೀಲ ಸಾಹಿತಿ. ಆತ ಸತ್ತು 181 ವರ್ಷಗಳಾದರೂ, ಇಂದಿಗೂ ಪುಷ್ಕಿನ್‌ನ ಬರಹ ಶೈಲಿಯನ್ನು ಅನುಸರಿಸುವವರಿದ್ದಾರೆ. ರಷ್ಯಾದಲ್ಲಿ ರೊಮ್ಯಾಂಟಿಸಿಸಂ ಮತ್ತು ರಿಯಲಿಸಂ ಸಾಹಿತ್ಯ ಚಳವಳಿಯನ್ನೇ ಹುಟ್ಟು ಹಾಕಿದ ಅಪ್ರತಿಮ ಬರಹಗಾರನಾದ ಪುಷ್ಕಿನ್, ಇಂದಿಗೂ ಅಲ್ಲಿನ ಸಾಂಸ್ಕೃತಿಕ ಲೋಕದ ಮಹಾ ಚೇತನ. ಪುಷ್ಕಿನ್ ಮರಣ ಹೊಂದಿ ಒಂದು ನೂರು ವರ್ಷಗಳಾದ ಸಂದರ್ಭದಲ್ಲಿ ಅವನ ಹೆಸರನ್ನು ತಮ್ಮ ನಗರಕ್ಕಿಡಬೇಕೆಂದು ಹದಿನೆಂಟಕ್ಕಿಂತ ಹೆಚ್ಚು ನಗರಗಳ ಆಡಳಿತ ವ್ಯವಸ್ಥೆ ನಿರ್ಧರಿಸಿತ್ತು. ಆದರೆ ಒಂದೇ ಹೆಸರಿನ ಎರಡಕ್ಕಿಂತ ಹೆಚ್ಚು ನಗರಗಳಿದ್ದರೆ ಗೊಂದಲವಾಗುವುದೆಂಬ ಕಾರಣಕ್ಕೆ ಆ ಪ್ರಸ್ತಾಪ ಕೈಬಿಡಲಾಯಿತು. ಇದು ಒಬ್ಬ ಕವಿಗೆ ಸಿಗಬಹುದಾದ ದೊಡ್ಡ ಗೌರವ. ಆನಂತರ ತ್ಸಾರ್ಸ್ಕೊಯೆ ಸೆಲೋ ಎಂಬ ನಗರಕ್ಕೆ ಪುಷ್ಕಿನ್ ಎಂದು ಹೆಸರಿಡಲಾಯಿತು. ರಷ್ಯಾದಲ್ಲಿ ತಯಾರಿಸಲಾದ ವಿಶೇಷ ಮಾದರಿಯ ಯುದ್ಧ ವಿಮಾನಕ್ಕೆ ಪುಷ್ಕಿನ್ ಎಂದೇ ಹೆಸರಿಡಲಾಗಿದೆ. ಅಲ್ಲದೆ ಅಲ್ಲಿನ ಯುದ್ಧ ನೌಕೆಗೂ ಈ ಮಹಾಕವಿಯ ಹೆಸರಿಡಲಾಗಿದೆ. ಇಂದಿಗೂ ಪುಷ್ಕಿನ್ ಜನಮಾನಸವನ್ನು ಪ್ರಭಾವಿಸುತ್ತಿದ್ದಾನೆ.

# ಜೀವದ ಹಂಗು ತೊರೆದು, ಮತ್ತಷ್ಟು ಜೀವನ್ಮುಖಿಯಾದ ಸಾಹಸಿ ಬ್ರಾನ್ಸನ್ !

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com



**ಯಾರು ಜೀವದ ಹಂಗು ತೊರೆದು ಪರಮ ಸಾಹಸಿಗಳಾಗುತ್ತಾರೋ, ಯಾರು ತಮ್ಮ ಕನಸುಗಳಿಗೆ ಸದಾ ಕಾವು ಕೊಟ್ಟು ಮರಿ ಮಾಡಿ, ಬಾನಂಗಳದಲ್ಲಿ ಹಾರಿ ಬಿಡುತ್ತಾರೋ, ಬೇರೆಯವರಿಂದ ಸಾಧ್ಯವೇ ಇಲ್ಲ ಎಂದು ಕೈಚೆಲ್ಲಿದ ನಂತರ ಅದನ್ನು ಯಾರು ಸಾಧ್ಯ ಮಾಡಿ ತೋರಿಸುತ್ತಾರೋ, ಜೀವನದಲ್ಲಿ ಎಲ್ಲಾ ಮುಗಿದು ಹೋಯಿತು ಎಂದು ಭಾವಿಸಿದ ನಂತರ, ಫೀನಿಕ್ಸ್ ಹಕ್ಕಿಯಂತೆ ಬೂದಿಯಿಂದ ಮೇಲೆದ್ದು ಬರುತ್ತಾರೋ, ಅವರು ಮಾತ್ರ ಬ್ರಾನ್ಸನ್ ಆಗಲು ಸಾಧ್ಯ.**

ರಿಚರ್ಡ್ ಬ್ರಾನ್ಸನ್ ಬಗ್ಗೆ ನನ್ನದು ಅತಿಯಾದ obsession. ನಾನು ಅವನನ್ನು ಕಳೆದ ಇಪ್ಪತ್ನಾಲ್ಕು ವರ್ಷಗಳಿಂದ ಕೊರಳ ಸ್ನೇಹಿತನಂತೆ ಹಿಂಬಾಲಿಸುತ್ತಿದ್ದೇನೆ. ಹಾಗಂತ ಅವನೇನು ನನ್ನ ರಕ್ತ ಸಂಬಂಧಿಯೂ ಅಲ್ಲ. ಸ್ನೇಹಿತನೂ ಅಲ್ಲ. ಅವನ ಕಂಪನಿ ಗಳಲ್ಲಿ ಪಾಲುದಾರನೂ ಅಲ್ಲ. ಆದರೆ ರಿಚರ್ಡ್ ಬ್ರಾನ್ಸನ್ ನನ್ನ ಪಾಲಿಗೆ ಒಬ್ಬ ಅಪರೂಪದ ವ್ಯಕ್ತಿ. ನಾನು ಅವನ ಒಳ್ಳೆಯ, ಸ್ಫೂರ್ತಿದಾಯಕ ವಿಚಾರಗಳನ್ನು ಓದಿದಾಗಲೆಲ್ಲ, ಅವನ್ನು ಜತನದಿಂದ ಹೆಕ್ಕಿ, ನನ್ನ ಓದುಗರ ಮುಂದೆ ಹರಡಿದ್ದೇನೆ. ನಾನು 'ವಿಜಯ ಕರ್ನಾಟಕ' ದಿನಗಳಿಂದಲೂ ಅವನ ಬಗ್ಗೆ ಬರೆಯುತ್ತಿದ್ದೇನೆ. ಕೆಲವು ಸಲ ಇವನ ಬಗ್ಗೆ ಬರೆದಿದ್ದು ಅತಿಯಾಯ್ತು ಎಂದೆನಿಸಿದರೂ ಸುಮ್ಮನಾಗಿಲ್ಲ. ಒಳ್ಳೆಯ ವಿಷಯಗಳನ್ನು ಎಷ್ಟೇ ಹೇಳಿದರೂ ಅದು ಅಪಥ್ಯವಾಗುವುದಿಲ್ಲ ಮತ್ತು ಒಳ್ಳೆಯ ವಿಷಯಗಳನ್ನು ಹೆಚ್ಚು ಹೆಚ್ಚು ಹೇಳಬೇಕು ಎಂದು ಅವನ ಬಗ್ಗೆ ಸತತವಾಗಿ ಬರೆದೆ.

ಎಲ್ಲಿ ಬ್ರಿಟನ್‌ನಲ್ಲಿ ಹುಟ್ಟಿದ ಬ್ರಾನ್ಸನ್.. ಎಲ್ಲಿಯ ಕನ್ನಡ ಓದುಗರು..? ನನಗೆ ಹತ್ತಿದ ಗೀಳನ್ನು ಓದುಗರಿಗೆ ವರ್ಗಾಯಿಸಿದೆ. ಅವರೂ ಬ್ರಾನ್ಸನ್ ವೈರಸ್ಸಿನಿಂದ ಸೋಂಕಿತರಾದರು. ಅವನ ಜೀವನ, ವಿಚಾರಗಳನ್ನು ಓದಿ ತಮ್ಮಷ್ಟಕ್ಕೇ ಪ್ರೀತಿಯಲಾರಂಭಿಸಿದರು. ಕೆಲವರು ತಮ್ಮ ಕಾರಿನ ಹಿಂಬದಿಗೆ ರಿಚರ್ಡ್ ಬ್ರಾನ್ಸನ್ ಎಂದು ಬರೆಯಿಸಿಕೊಂಡರು. 'ಐ ಲವ್ ಬ್ರಾನ್ಸನ್' ಎಂದು ಸ್ಟಿಕ್ಕರ್ ಅಂಟಿಸಿಕೊಂಡರು. I belong to Richard Branson Club ಎಂದು ಕಾರಿನ ಹಿಂಬದಿಗೆ, ಸ್ಕೂಟರಿನ ಮುಂಬದಿಗೆ ಬರೆಯಿಸಿಕೊಂಡರು. ನನ್ನ ಓದುಗ ಮಿತ್ರ ಭೂಷಣ್ ತನ್ನ ಹೆಸರನ್ನು 'ಭೂಷಣ್ ಬ್ರಾನ್ಸನ್' ಎಂದು ಬದಲಿಸಿಕೊಂಡ!

ದಾವಣಗೆರೆಯಲ್ಲಿ, ಅರಸೀಕೆರೆಯಲ್ಲಿ, ಹೊಸಪೇಟೆಯಲ್ಲಿ, ಮೈಸೂರಿನಲ್ಲಿ, ಹಾಸನದಲ್ಲಿ ಬ್ರಾನ್ಸನ್ ಹೆಸರಿನಲ್ಲಿ ಸಂಘಗಳು ತಲೆಯೆತ್ತಿದವು. ನಾನು ಈ ಎಲ್ಲಾ ಊರುಗಳಿಗೆ ಹೋಗಿ, ಬ್ರಾನ್ಸನ್ ಸಂಘಗಳನ್ನು ಉದ್ಘಾಟಿಸಿ ಬಂದೆ. ದಾವಣಗೆರೆಯ ವಿರೂಪಾಕ್ಷ ಅಂಗಡಿಯವರು ತಮ್ಮ ಮಗನಿಗೆ ಬ್ರಾನ್ಸನಪ್ಪ ಎಂದೇ ಹೆಸರಿಟ್ಟರು. ನಾನು ಆ ನಾಮಕರಣ ಕಾರ್ಯಕ್ರಮಕ್ಕೂ ಹೋಗಿದ್ದೆ. ಚೋಳಹಿರೇವಾಡಿಯ ಶಂಕರ ಗೌಡರು ಹೊಸತಾಗಿ ಕಟ್ಟಿಸಿದ ತಮ್ಮ ಮನೆಗೆ 'ಬ್ರಾನ್ಸನ್ ನಿವಾಸ' ಎಂದು ಹೆಸರಿಟ್ಟರು. ನನ್ನ ವೈದ್ಯ ಸ್ನೇಹಿತರಾದ ಡಾ.ಕಿರಣ್ ವಾಡಿ ತಮ್ಮ ಪ್ರೀತಿಯ ನಾಯಿಗೆ 'ಬ್ರಾನ್ಸನ್' ಎಂದು ಹೆಸರಿಟ್ಟರು. ಕೆಲವು ಸ್ನೇಹಿತರು ಬ್ರಾನ್ಸನ್ ಹೆಸರಿನಲ್ಲಿ ವಾಟ್ಸಾಪ್ ಗ್ರೂಪ್‌ಗಳನ್ನು ಮಾಡಿದರು. ಆತ ಏನೇ ಮಾಡಲಿ, ಮಾತಾಡಲಿ ಅವನ್ನೆಲ್ಲ ಆ ಗ್ರೂಪ್ ನಲ್ಲಿ ಶೇರ್ ಮಾಡಲಾರಂಭಿಸಿದರು.



ಎರಡು ವರ್ಷಗಳ ಹಿಂದೆ, ನಾನು ವಿಮಾನದಲ್ಲಿ ಹೋಗುವಾಗ, ನನ್ನ ಪಕ್ಕದಲ್ಲಿ ಕುಳಿತವರೊಬ್ಬರು ನಾನು ಬ್ರಾನ್ಸನ್ ಬಗ್ಗೆ ಬರೆದ 'ರಿಚರ್ಡ್ ಬ್ರಾನ್ಸನ್ ವರ್ಜಿನಲ್ ವಿಚಾರಗಳು' ಎಂಬ ಪುಸ್ತಕವನ್ನು ಓದುತ್ತಿದ್ದರು. ನಾನು ಮೆಲ್ಲಗೆ, ಬೇಕೆಂದೇ 'ಸಾರ್, ಯಾವ ಪುಸ್ತಕ ಓದುತ್ತಿದ್ದೀರಿ?' ಎಂದು ಕೇಳಿದೆ. ಅವರು ನನ್ನನ್ನು ದುರುಗುಟ್ಟಿ ನೋಡಿ, ಪುಸ್ತಕದ ಮುಖಪುಟವನ್ನು ನನ್ನ ಮುಖಕ್ಕೆ ಹಿಡಿದರು. ಅವರ ಮುಖದಲ್ಲಿ ಅಸಹನೆಯಿತ್ತು. 'ಓಹೋ.. ಅದಾ?' ಎಂದು ಸುಮ್ಮನಾದೆ. ಇಳಿದು ಹೋಗುವಾಗ, 'ಸಾರ್, ಆ ಪುಸ್ತಕ ಬರೆದವ ನಾನೇ' ಎಂದು ಮೆಲ್ಲಗೆ ಹೇಳಿದೆ. ಅವರಿಗೆ ನಂಬಲು ಆಗಲಿಲ್ಲ.

ಬ್ರಾನ್ಸನ್ ಬಗ್ಗೆ ನಾನು ಬರೆದ 'ವರ್ಜಿನಲ್ ವಿಚಾರಗಳು' ಕೃತಿಯ ಹತ್ತು ಸಾವಿರಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿರಲು ಸಾಕು. ವರ್ಷದಲ್ಲಿ ಕನಿಷ್ಠ ಎರಡು ಆವೃತ್ತಿಗಳು ಹೊರಬರುತ್ತಿವೆ. ಮಂಡ್ಯದ ಕೆ.ಜೆ.ರಮೇಶ ಗೌಡರು ಪ್ರತಿ ವರ್ಷ ತಮ್ಮ ಜನ್ಮದಿನದಂದು ಈ ಪುಸ್ತಕದ ಮುನ್ನೂರು ಪ್ರತಿಗಳನ್ನು ಶಾಲಾ ಮಕ್ಕಳಿಗೆ, ಕಳೆದ ಐದು ವರ್ಷಗಳಿಂದ ಕೊಡುತ್ತಿದ್ದಾರೆ. ತಾವು ಕೊಡುವ ಪುಸ್ತಕಗಳನ್ನು ಓದಿ, ಒಬ್ಬನಾದರೂ ಅವನಂತಾದರೆ ತಮ್ಮ ಶ್ರಮ ಸಾರ್ಥಕ ಎಂದು ಅವರು ಭಾವಿಸಿದ್ದಾರೆ. ಇವು ನನ್ನ ಗಮನಕ್ಕೆ ಬಂದಿರುವ ಕೆಲವು ಸಂಗತಿಗಳು. ಇನ್ನೂ ಅನೇಕ ಸಣ್ಣ ಪುಟ್ಟ ಪ್ರಸಂಗಗಳನ್ನು ಹೇಳಿಲ್ಲ. ಇನ್ನು ಗಮನಕ್ಕೆ ಬಾರದವು ಎಷ್ಟೋ? .

ಬ್ರಾನ್ಸನ್ ಬಗ್ಗೆ ನನಗೆ ಯಾಕೆ ಆ ಪರಿ ಸೆಳೆತ, ಗೀಳು, ಟಚಿಠಛಿಠಠಜಿಟ್ಟಿ ಎಂದು ನೀವು ಕೇಳಬಹುದು. ಇದರಲ್ಲಿ ನನ್ನ ಹೆಚ್ಚುಗಾರಿಕೆಯೇನಿಲ್ಲ. ಯಾರೋ ತಮ್ಮ ಹೆಸರನ್ನು ಬದಲಿಸಿಕೊಂಡರೆ, ತಮ್ಮ ಮನೆಗೆ ಆತನ ಹೆಸರಿಟ್ಟರೆ, ಮಗನಿಗೆ ಅವನ ಹೆಸರಿಟ್ಟರೆ, ಅವನ ಹೆಸರಿನಲ್ಲಿ ಸಂಘ ಸ್ಥಾಪಿಸಿದರೆ ಅಥವಾ ಇನ್ನೂ ಏನೇನೋ.. ಅವಕ್ಕೆಲ್ಲಾ ಕಾರಣ ಬ್ರಾನ್ಸನ್ ನೇ. ಆತನ ವ್ಯಕ್ತಿತ್ವವೇ ಅಂಥದ್ದು. ಜಗತ್ತಿನಲ್ಲಿ ಅದೆಷ್ಟೋ ಶ್ರೀಮಂತರಿದ್ದಾರೆ. ಲಕ್ಷಾಂತರ ಕೋಟಿ ಸಂಪಾದಿಸಿದವರು ಅನೇಕರಿದ್ದಾರೆ. ಆದರೆ ಎಲ್ಲಾ ಶ್ರೀಮಂತರು ಬ್ರಾನ್ಸನ್ ಆಗಲು ಸಾಧ್ಯವಿಲ್ಲ. ಬ್ರಾನ್ಸನ್ ಒಬ್ಬನೇ !

ಕಾರಣ ಬ್ರಾನ್ಸನ್ ಆಗಲು ಹಣಬೇಕಾಗಿಲ್ಲ. ಯಾರು ಜೀವದ ಹಂಗು ತೊರೆದು ಪರಮ ಸಾಹಸಿಗಳಾಗುತ್ತಾರೋ, ಯಾರು ತಮ್ಮ ಕನಸುಗಳಿಗೆ ಸದಾ ಕಾವು ಕೊಟ್ಟು ಮರಿ ಮಾಡಿ, ಬಾನಂಗಳದಲ್ಲಿ ಹಾರಿ ಬಿಡುತ್ತಾರೋ, ಬೇರೆಯವರಿಂದ ಸಾಧ್ಯವೇ ಇಲ್ಲ ಎಂದು ಕೈಚೆಲ್ಲಿದ ನಂತರ ಅದನ್ನು ಯಾರು ಸಾಧ್ಯ ಮಾಡಿ ತೋರಿಸುತ್ತಾರೋ, ಜೀವನದಲ್ಲಿ ಎಲ್ಲಾ ಮುಗಿದು ಹೋಯಿತು ಎಂದು ಭಾವಿಸಿದ ನಂತರ, ಫೀನಿಕ್ಸ್ ಹಕ್ಕಿಯಂತೆ ಬೂದಿಯಿಂದ ಮೇಲೆದ್ದು ಬರುತ್ತಾರೋ, ಅವರು ಮಾತ್ರ ಬ್ರಾನ್ಸನ್ ಆಗಲು ಸಾಧ್ಯ.

ಈ ವಿಶ್ವದ ನೂರು ಮಂದಿ ಶ್ರೀಮಂತರಲ್ಲಿ ಬ್ರಾನ್ಸನ್ ಕೂಡ ಒಬ್ಬ. ಆತ ಮಾಡದ ಬಿಜಿನೆಸ್‌ಗಳಿಲ್ಲ. ವರ್ಜಿನ್ ಹೆಸರಿನಲ್ಲಿ ಆತ ಮುನ್ನೂರಕ್ಕೂ ಹೆಚ್ಚು ಕಂಪನಿಗಳನ್ನು ಸ್ಥಾಪಿಸಿ ಅಷ್ಟೇ ಸಂಖ್ಯೆಯ ವ್ಯವಹಾರಗಳನ್ನು ಮಾಡುತ್ತಿದ್ದಾನೆ. ಆತನ ವಿಮಾನ ಕಂಪನಿಯಿದೆ. ಹಡಗು, ರೈಲು ಸಂಸ್ಥೆಗಳಿವೆ. ವರ್ಜಿನ್ ಬುಕ್ಸ್ ಹೆಸರಿನಲ್ಲಿ ಆತ ಪುಸ್ತಕ ವ್ಯಾಪಾರವನ್ನೂ ಮಾಡುತ್ತಾನೆ. ಆ ಪುಸ್ತಕದಂಗಡಿಗಳಲ್ಲಿ, ಬೇರೆಲ್ಲೂ ಸಿಗದ ಪುಸ್ತಕಗಳು ಸಿಗುತ್ತವೆ. ಆತ ಈ ಎಲ್ಲಾ ವ್ಯವಹಾರಗಳಲ್ಲಿ ಲಾಭ ಮಾಡುತ್ತಿದ್ದಾನೆ. ಅವನ ಮುಂದೆ ಲಾಭ ತರುವ ಯಾವುದೇ ಬಿಜಿನೆಸ್ ಐಡಿಯಾಗಳನ್ನು ಕೊಟ್ಟರೂ ತಕ್ಷಣ ಅದಕ್ಕೊಂದು ಕಂಪನಿ ಸ್ಥಾಪಿಸಿ ಅದನ್ನು ಕಾರ್ಯರೂಪಕ್ಕೆ ತರುತ್ತಾನೆ.

ಥಾರ್ ಮರುಭೂಮಿಯಲ್ಲಿ ಈ ಪದ್ಧತಿ ಬಳಸಿ, ಬಾಳೆತೋಟವನ್ನು ಬೆಳೆದು, ಇಷ್ಟು ಲಾಭ ಗಳಿಸಬಹುದು ಎಂಬ ಯೋಜನೆಯನ್ನು ಕೊಟ್ಟರೆ, ಆತ 'ವರ್ಜಿನ್ ಬನಾನಾಸ್' ಎಂಬ ಕಂಪನಿ ಸ್ಥಾಪಿಸಿ, ಅಲ್ಲಿ ಬೆಳೆದ ಬಾಳೆಹಣ್ಣುಗಳನ್ನು ವಿದೇಶಗಳಿಗೆ ರಫ್ತು ಮಾಡಿ, ಚಮತ್ಕಾರ ಮಾಡಿ ತೋರಿಸುತ್ತಾನೆ. ಯಾವುದೇ ವ್ಯವಹಾರವನ್ನಾದರೂ ಯಶಸ್ವಿಗೊಳಿಸಿ, ಲಾಭ ಮಾಡುವುದು ಹೇಗೆ ಎಂಬುದನ್ನು ಅವನಿಂದ ಕಲಿಯಬೇಕು. ಹಾಗೆಂದು ಅವನು ನಷ್ಟ ಮಾಡಿಕೊಂಡಿಲ್ಲ ಎಂದಲ್ಲ. ನಷ್ಟದ ವ್ಯವಹಾರವನ್ನೂ ಮೇಲೆತ್ತುವುದು ಹೇಗೆ ಎಂಬುದು ಅವನಿಗೆ ಗೊತ್ತು. ಒಟ್ಟಾರೆ ಬ್ರಾನ್ಸನ್ ಛಲದಂಕಮಲ್ಲ. ಆತನಿಗೆ ನಿಲುಕದ ವ್ಯವಹಾರವಿಲ್ಲ. ಯಾವುದೇ ಬಿಜಿನೆಸ್ ಇರಲಿ ಅದಕ್ಕೊಂದು ಆಪ್ಯಾಯಮಾನ ಇಕೋ ಸಿಸ್ಟಮ್' ರೂಪಿಸಿ, ಅಲ್ಲಿ ಲಾಭ ಮಾಡಿ ತೋರಿಸುವುದನ್ನು ಆತ ತನ್ನ ವ್ಯವಹಾರ ಧರ್ಮವನ್ನಾಗಿ ಮಾಡಿಕೊಂಡಿದ್ದಾನೆ.

ಮನುಷ್ಯನಿಗೆ ಹಣವಾಗುತ್ತ ಹೋದಂತೆ ಆತನ ಆದ್ಯತೆಗಳು ಬದಲಾಗುತ್ತವೆ. ಆತ ಹೆಚ್ಚು ಹೆಚ್ಚು ತನ್ನ ಬಗ್ಗೆ ಮೋಹ ಬೆಳೆಸಿಕೊಳ್ಳುತ್ತಾನೆ. ತಾನು ಗಳಿಸಿದ್ದೆಲ್ಲವನ್ನೂ ಬಚ್ಚಿಟ್ಟುಕೊಳ್ಳುವುದು ಹೇಗೆ ಎಂದು ಯೋಚಿಸಲಾರಂಭಿಸುತ್ತಾನೆ. ಆತನಿಗೆ ಅವನ್ನೆಲ್ಲಾ ಭೋಗಿಸುವುದು ಹೇಗೆ ಎಂಬ ಪ್ರಶ್ನೆ ಕಾಡಲಾರಂಭಿಸುತ್ತದೆ. ಹೆಚ್ಚು ಹಣವಾಗುತ್ತಿದ್ದಂತೆ, ಸಾವಿನ ಪ್ರಶ್ನೆ ಭೂತಾಕಾರವಾಗಿ ಕಾಡಲಾರಂಭಿಸುತ್ತದೆ. ತನ್ನ ಆಸ್ತಿಪಾಸ್ತಿಗಳ ಬಗ್ಗೆ ಎಲ್ಲಿಲ್ಲದ ಕಾಳಜಿ ಮೂಡಲಾರಂಭಿಸುತ್ತದೆ. ಹೆಚ್ಚು ವರ್ಷ ಐಷಾರಾಮಿಯಾಗಿ ಬಾಳುವುದು ಹೇಗೆ ಎಂಬ ಯೋಚನೆಯ ಸುಳಿಯಲ್ಲಿ ಆತ ಮಗ್ನನಾಗುತ್ತಾನೆ. ತನ್ನ ಸುತ್ತ ಭದ್ರಕೋಟೆ ನಿರ್ಮಿಸಿಕೊಳ್ಳುತ್ತಾನೆ. ಸಾಮಾನ್ಯ ಜನರಿಂದ ದೂರವಾಗುತ್ತಾ ಹೋಗುತ್ತಾನೆ. ಜೀವಭಯದಿಂದ ತನ್ನ ಸುತ್ತ ಅಂಗರಕ್ಷಕರನ್ನು ಇಟ್ಟುಕೊಳ್ಳುತ್ತಾನೆ. ಏನೇ ಆದರೂ ಸಾವು ಭೇದಿಸಿಕೊಂಡು ಬರಬಾರದು ಎಂಬ ಭಯ ಅವನನ್ನು ಕಾಡುತ್ತಲೇ ಇರುತ್ತದೆ. ಹಣ ಬರುತ್ತಲೇ ಸುರಕ್ಷತೆಗೆ ಹೆಚ್ಚಿನ ಮಹತ್ವ ನೀಡುತ್ತಾನೆ. ತನ್ನ ಸುತ್ತ ಭದ್ರತೆಯ ಬಂಕರ್ ನಿರ್ಮಿಸಿಕೊಳ್ಳುತ್ತಾನೆ. ಕಾರಿನಲ್ಲಿ ಹೋಗುವಾಗ ಅಪಘಾತವಾದರೆ, ತನಗೇನೂ ಆಗಬಾರದು ಎಂದು ಏರ್ ಬ್ಯಾಗ್ ಗಳಿರುವ ದುಬಾರಿ ಕಾರಿನಲ್ಲಿ ಪಯಣಿಸುತ್ತಾನೆ. ಶ್ರೀಮಂತಿಕೆ ಅವನಲ್ಲಿ ಭಯ, ದುಗುಡವನ್ನು ಮೂಡಿಸುತ್ತದೆ.

ಆದರೆ ಬ್ರಾನ್ಸನ್ ಈ ಎಲ್ಲಾ ಮಾತುಗಳಿಗೆ ಸರಿ ಉಲ್ಟಾ. ಹೆಚ್ಚು ಹೆಚ್ಚು ಶ್ರೀಮಂತನಾದಷ್ಟೂ ಹೆಚ್ಚು ಹೆಚ್ಚು ಸಾಹಸಿಯಾದ. ಹುಚ್ಚು ಸಾಹಸಕ್ಕೆ ಬಿದ್ದ. ಬಿಸಿಗಾಳಿ ಬಲೂನಿನಲ್ಲಿ, ವಿಶ್ವ ಪರ್ಯಟನೆಗೆ ಹೊರಟ. ಅದರಲ್ಲಿ ಹೋಗುವಾಗ, ಅದು ಸಮುದ್ರದಲ್ಲಿ ಬಿತ್ತು. ಆತ ಸತ್ತೇ ಹೋಗಬೇಕಿತ್ತು. ಜೀವ ಸಹಿತ ಬಚಾವ್ ಆದ. ಅಷ್ಟಾದರೂ ತನ್ನ ಪಯಣವನ್ನು ನಿಲ್ಲಿಸಲಿಲ್ಲ. ಹೆಲಿಕಾಪ್ಟರ್ ಮೇಲಿಂದ ಜಿಗಿಯುವ ಮನಸ್ಸಾಯಿತು. ಅಲ್ಲಿಂದ ಜಿಗಿದು ಪ್ಯಾರಚ್ಯೂಟ್‌ನಲ್ಲಿ ಸುರಕ್ಷಿತವಾಗಿ ಭೂಮಿಗಿಳಿದ. ಹಾರುವ ವಿಮಾನದಿಂದ ಕೆಳಕ್ಕೆ ಜಿಗಿದ. ಸಮುದ್ರದಲ್ಲಿ ಶಾರ್ಕ್ ಗಳ ಜತೆಗೆ ಈಜಲು ಹೊರಟ. ತನ್ನ ಅರವತ್ತೈದನೇ ವಯಸಿನಲ್ಲಿ ಗುಡ್ಡ, ಬೆಟ್ಟ, ತೊರೆಯಲ್ಲಿ ಸೈಕಲ್ ಸವಾರಿ ಸ್ಪರ್ಧೆಯಲ್ಲಿ ಭಾಗವಹಿಸಿದ. ಸೈಕಲ್ ಮೇಲಿಂದ ಬಿದ್ದು ಮೈಕೈ ತರಚಿಕೊಂಡು ಗಾಯ ಮಾಡಿಕೊಂಡ. ಬೇರೆಯವರಾಗಿದ್ದರೆ ಮತ್ತೆ ಸೈಕಲ್ ಮೇಲೆ ಕುಳಿತುಕೊಳ್ಳುತ್ತಿರಲಿಲ್ಲ. ಮುಂದಿನ ವರ್ಷ ಮತ್ತೆ ಆ ಸ್ಪರ್ಧೆಯಲ್ಲಿ ಭಾಗವಹಿಸಲು ಸೈಕಲ್ ತುಳಿಯಲಾರಂಭಿಸಿದ.

ಬ್ರಾನ್ಸನ್ ಇಷ್ಟವಾಗುವುದೇ ಈ ಕಾರಣಕ್ಕೆ. ಇದರಿಂದ ಆತ ಉಳಿದೆಲ್ಲರಿಗಿಂತ ಭಿನ್ನವಾಗಿ ಕಾಣುತ್ತಾನೆ. ನೀವು ಮುಖೇಶ್ ಅಂಬಾನಿಯವರ ಹತ್ತಿರ ಹೋಗಿ, 'ಶಾರ್ಕ್‌ಗಳ ಜತೆ ಈಜೋಣವಾ?' ಅಂತ ಕೇಳಿ. ಉಹುಂ...ಸಾಧ್ಯವೇ ಇಲ್ಲ. ಮೊಸಳೆಯಿರುವ ಬಾವಿಯನ್ನು ಇಣುಕಿ ನೋಡಲೂ ಅವರು ಧೈರ್ಯ ಮಾಡುವುದಿಲ್ಲ. ಹಾಗೆ ಇಣುಕಿ ನೋಡುವಾಗ ಕಾಲು ಜಾರಿ ಬಿದ್ದರೆ, ಏನು ಗತಿ? ಷೇರು ಪೇಟೆಯಲ್ಲಿ ರಿಲಯನ್ಸ್ ಷೇರಿನ ಬೆಲೆ ಬಿದ್ದು ಹೋದರೆ ಎಂದು ಅವರು ಯೋಚಿಸುತ್ತಾರೆ. ತಾನು ಗಳಿಸಿದೆಲ್ಲವನ್ನೂ ಅನುಭವಿಸಲು ಆಗದಿದ್ದರೆ ಎಂದು ಹಿಂದೇಟು ಹಾಕುತ್ತಾರೆ. ವಿಮಾನ ಹತ್ತುವಾಗಲೂ ನೂರೆಂಟು ಸಲ ದೇವರನಾಮ ಜಪಿಸುತ್ತಾರೆ. ತೆಂಗಿನಕಾಯಿ ಹಿಡಿದು ಯಾರ ಹತ್ತಿರವೂ ಮಾತಾಡದೇ, ದೇವರಸ್ಮರಣೆಯಲ್ಲಿರುತ್ತಾರೆ. ವಿಮಾನ ಬಿದ್ದರೆ ಏನು ಗತಿ ಎಂದು ಅವರ ಒಳಮನಸ್ಸು ಹೇಳುತ್ತಲೇ ಇರುತ್ತದೆ.

ಹೀಗೆಲ್ಲಾ ಬ್ರಾನ್ಸನ್ ಯೋಚಿಸಿದ್ದರೆ, ಈ ಎಪ್ಪತ್ತೊಂದನೇ ವಯಸ್ಸಿನಲ್ಲಿ, ಆತ ಬಾಹ್ಯಾಕಾಶ ಪ್ರವಾಸಕ್ಕೆ ಹೋಗುವುದು ಸಾಧ್ಯವಾಗುತ್ತಿತ್ತಾ? ಮೊನ್ನೆ ಆತ ಬಾಹ್ಯಾಕಾಶ ಯಾತ್ರೆಯನ್ನೂ ಯಶಸ್ವಿಯಾಗಿ ಮಾಡಿಬಂದ. ಇಡೀ ಜಗತ್ತೇ ವಿಸ್ಮಯದಿಂದ ಮೂಗಿನ ಮೇಲೆ ಬೆರಳಿಟ್ಟಿತು. ಬ್ರಾನ್ಸನ್ ನಿರಾಯಾಸವಾಗಿ ಬಾಹ್ಯಾಕಾಶ ಯಾನ ಮುಗಿಸಿ ಧರೆಗಿಳಿದ ! ನನಗೆ ಬ್ರಾನ್ಸನ್ ಇಷ್ಟವಾಗುವುದು ಈ ಕಾರಣಕ್ಕೆ. ಹಣವನ್ನು ಪ್ರೀತಿಸುವವನು, ಜೀವವನ್ನು ಮತ್ತಷ್ಟು ಪ್ರೀತಿಸುತ್ತಾನೆ. ಆದರೆ ಬ್ರಾನ್ಸನ್ ಹಾಗಲ್ಲ, ಹಣದ ಮೋಹ ಅವನಿಗೆ ಜೀವದ ಹಂಗನ್ನು ಬಿಡಿಸಿತು. ಈ ರೀತಿ ಹಂಗು ಬಿಡಿಸಿಕೊಂಡವರು ಅತ್ಯಲ್ಪ. ಆದರೆ ಬ್ರಾನ್ಸನ್ ಜೀವದ ಹಂಗು ತೊರೆದು ಮತ್ತಷ್ಟು ಜೀವನ್ಮುಖಿಯಾದ, ಬದುಕಿನ ಕಟುವಾಸ್ತವಗಳಿಗೆ ಮತ್ತಷ್ಟು ಹತ್ತಿರವಾದ.

# ನಾವು ಈಗಲ್ಲ, ಎಂದಿಗೂ ಹೀಗೆ ಇದ್ದೇವೆ

ಪ್ರಾಣೇಶ್ ಪ್ರಪಂಚ
ಗಂಗಾವತಿ ಪ್ರಾಣೇಶ್
editoped@gmail.com



ನಾವು ಜೀವಿಸುತ್ತಿರುವ ಈ ಕಾಲಾವಧಿಯೂ ಅತಿ ಕೆಟ್ಟದ್ದು ಎಂದು ಆಗಾಗ ಎಲ್ಲರಿಗೂ ಅನಿಸುತ್ತಿರುತ್ತದೆ. ಹೆಚ್ಚುತ್ತಿರುವ ಜನಸಂಖ್ಯೆ, ಪ್ರಕೃತಿ ನಾಶದಿಂದ ಹೆಚ್ಚುತ್ತಿರುವ ಭೂಮಿಯ ತಾಪಮಾನ, ಜತೆಜತೆಗೆ ಶಬ್ದ ಮಾಲಿನ್ಯ, ಬೂಟಾಟಿಕೆಯ ಬದುಕುವ ರೀತಿ, ಕರೋನಾ ಬಂದು ಹೋಗಿ, ಬಂದು ಹೋಗಿ, ಮಾಡುತ್ತಿರುವುದಂತೂ ಇನ್ನೂ ಬದುಕನ್ನು ಅಸಹನೀಯಗೊಳಿಸಿದೆ. ಹೀಗಾಗಿ ದೇವರು, ವ್ರತ, ಪೂಜೆಗಳನ್ನು ದೇವರು ಇದಕ್ಕಾಗಿಯೇ ಕಾದು ಕೂತಿದ್ದಾನೇನೋ ಎನ್ನುವಂತೆ ಕಂಡ ಕಂಡ ದೇವರು, ಕಂಡ ಕಂಡ ಕ್ಷೇತ್ರಗಳಿಗೆ ದಾಳಿ ಮಾಡುತ್ತಿದ್ದಾರೇನೋ ಎನ್ನುವಂತೆ ಜನ ನುಗ್ಗುತ್ತಿದ್ದಾರೆ. ಗುಡಿಗಳಲ್ಲಿ ದೇವರಿಲ್ಲ, ಕ್ಷೇತ್ರಗಳಲ್ಲಿ ದೇವರಿಲ್ಲ, ಕಲ್ಲು ದೇವರು ದೇವರಲ್ಲ ಎಂದರೆ, ಹಾಗೆ ಅಂದವನ ತಲೆ ಮೇಲೆ ಕಲ್ಲು ಎತ್ತಿಹಾಕಲು ರೆಡಿಯಾಗಿದ್ದಾರೆ, ದೇವರು ಹೊರಗಿಲ್ಲ, ನಿಮ್ಮ ಹೃತ್ಕಮಲದಲ್ಲಿದ್ದಾನೆ ಎನ್ನುವವನಿಗಂತೂ ಅವನ ಎದೆ ಮೇಲೆ ಕೂತು ಅವನ ಹೃದಯವನ್ನೇ ಕಮಲದ ಹೂವನ್ನು ಕಿತ್ತುವಂತೆ ಕಿತ್ತು ಕಾಲಲ್ಲಿ ತುಳಿಯುವ ಮದಗಜದಂತೆ ಮಾಡಿದರೂ ಮಾಡಿದರೇ!

ಇವು ಸಾಮಾನ್ಯ ಭಕ್ತರ ಪಾಡಾಯಿತು. ಇನ್ನು ಸ್ವಲ್ಪ ಯೋಚಿಸುವವರು ಯೋಗ, ಧ್ಯಾನ, ಮೌನ, ಪ್ರಾಣಾಯಾಮ ಎಂದೆಲ್ಲ ಆಚರಿಸುತ್ತಿದ್ದಾರೆ. ಪಿರಮಿಡ್ ಯೋಗ, ಆರ್ಟ್ ಆಫ್ ಲಿವಿಂಗ್, ಬ್ರಹ್ಮಕುಮಾರಿ, ಸಹಜ ಸ್ಥಿತಿಯೋಗ, ವಿಪಶ್ಯನಾ ಇತ್ಯಾದಿ ಧ್ಯಾನ ಕೇಂದ್ರಗಳಲ್ಲಿ ಅವರ ಅಭಿರುಚಿ, ವಯಸ್ಸು, ಸಮಯಕ್ಕೆ ತಕ್ಕಂತೆ ನೆಮ್ಮದಿಗಾಗಿ ಇವನ್ನು ಆರಿಸಿಕೊಂಡಿದ್ದಾರೆ. ಇನ್ನುಳಿದವರು ಏನನ್ನೂ ಆಯ್ದುಕೊಳ್ಳದೇ ಮನಬಂದಂತೆ ತಿಂದು, ಕುಡಿದು, ತಮ್ಮ ಜೀವನದ ಆಯ್ಕೆಯನ್ನು ಯಮನಿಗೇ ಬಿಟ್ಟಿದ್ದಾರೆ.

ಈ ದೇಶದ ಕೃಷಿ ಕಾಯಕವು ಸರ್ವ ರೀತಿಯಲ್ಲೂ ಧ್ಯಾನ, ವ್ಯಾಯಾಮ, ಯೋಗ, ಶ್ರಮ, ಸಹನೆಗಳ ಸಂಕೇತವಾಗಿತ್ತು. ಆದರೆ ಸ್ವಾತಂತ್ರ್ಯ ನಂತರದಲ್ಲಿ ಬ್ರಿಟಿಷರನ್ನೇನೋ ಓಡಿಸಿದೆವು, ಆದರೆ ಅವರ ಆಹಾರ ಪದ್ಧತಿ, ಶಿಕ್ಷಣ, ಜೀವನ ಪದ್ಧತಿ, ಡೌಲು, ದೌಲತ್ತುಗಳನ್ನು ಓಡಿಸಲಾಗದೇ ಎಲ್ಲವನ್ನೂ ವಿಜ್ಞಾನಕ್ಕೊಪ್ಪಿಸಿ ನಮ್ಮ ನೆಮ್ಮದಿಯನ್ನೇ ಒತ್ತೆಯಿಟ್ಟು, ಈಗೀಗಂತೂ ಕಳೆದುಕೊಂಡೇ ಬಿಟ್ಟಿದ್ದೇವೆ. ಆಧ್ಯಾತ್ಮ, ತತ್ವಜ್ಞಾನಗಳನ್ನಂತೂ ಅಪಹಾಸ್ಯ ಮಾಡಿ ನಗುವ ಮಟ್ಟಕ್ಕೆ ನಮ್ಮ ಲದ್ದಿ ಜೀವಿಗಳು ತಂದಿಟ್ಟು ಬಿಟ್ಟರು. ಸತ್ಯಗಳನ್ನು, ವಾಸ್ತವಗಳನ್ನು ಒಪ್ಪಿಕೊ ಳ್ಳದೇ ತರ್ಕ, ವಾದ, ಹೀಗಳೆಯುವಿಕೆಯೇ ಬುದ್ಧಿವಂತರ ಲಕ್ಷಣ ಎನ್ನುವಂತೆ ಮಾಡಿಬಿಟ್ಟರು. ಜ್ಞಾನ, ಭಕ್ತಿ, ವೈರಾಗ್ಯ, ಶ್ರವಣ, ಕೀರ್ತನ, ಜಪ, ತಪ, ಉಪದೇಶ, ಅಗ್ನಿಹೋತ್ರ, ಸ್ವಾಧ್ಯಾಯ, ಸಜ್ಜನಸಂಗ, ಮಂತ್ರ, ಹೋಮ, ಹವನ ಎಂಬುವುಗಳೆಲ್ಲ ಕೆಲಸಕ್ಕೆ ಬಾರದ ಮೈಗಳ್ಳರ, ಉಚ್ಚ ಜಾತಿಯವರ ಸೋಮಾರಿತನದ ಸಂಕೇತ ಎಂಬಂತೆ ಸಂತೆಕೂಡಿಸಿ ಬೊಬ್ಬೆ ಹೊಡೆಯುವವರ ಕೆಲಸವಾಗಿ ಹೋ ಯಿತು. ದರ್ಪ, ದಾರ್ಷ್ಟ್ಯ, ದೌರ್ಜನ್ಯ, ದಬ್ಬಾಳಿಕೆಗಳನ್ನೇ ದುಡಿಮೆ ಮಾಡಿಕೊಂಡ ದಾಂಡಿಗರೇ ಸಾತ್ವಿಕರನ್ನು ಆಳುವ ಧಣಿಗಳಾದರು. ಮೌಲ್ಯಗಳು ಮಕಾಡೆ ಮಲಗಿಬಿಟ್ಟವು.

ಇವೆಲ್ಲ ಈಗ ನಡೆಯುತ್ತಿದೆ ಎಂದು ನಾನು, ನೀವು ನಂಬಿದ್ದೇವೆ ಆದರೆ, ಇದು 1480ರಲ್ಲಿ ಜನಿಸಿ ನೂರಾ ಇಪ್ಪತ್ತು ವರ್ಷ ಬಾಳಿದ ಶಿರಸಿ ಬಳಿಯ ಯತಿಗಳಾದ ಶ್ರೀ ವಾದಿರಾಜ ಸ್ವಾಮಿಗಳು ಬರೆದ ಒಂದು ಕೀರ್ತನೆಯಲ್ಲಿ ಓದಿದ ನನಗೆ ಎಂದಿಗೂ ನಾವು ಹೀಗೆ ಇದ್ದೇವೆ ಎನ್ನುವಂತೆ ಈ ಲೇಖನಕ್ಕೆ ಪ್ರೇರಣೆ ಸಿಕ್ಕಿತು. ಸೋಂದಾ, ಸ್ವಾದಿ, ಶ್ರೀಕ್ಷೇತ್ರ ಸೋದೆ ಎಂದೆಲ್ಲ ಪ್ರಸಿದ್ಧವಾಗಿರುವ ಈ ಊರು ವಿಜಯನಗರದ ಸಾಮಂತ ರಾಜನಾಗಿದ್ದ ಅರಸಪ್ಪ ನಾಯಕನ ರಾಜಧಾನಿಯಾಗಿತ್ತು. ಆರ್ಥಿಕವಾಗಿ ಸುಸಂಪನ್ನವಾಗಿಯೂ, ಸುಭದ್ರವಾಗಿದ್ದ ಈ ರಾಜ್ಯದಲ್ಲಿ ಪ್ರಜೆಗಳು ನೆಮ್ಮದಿಯಾಗಿದ್ದರು. ದೊರೆಗಳು ಸ್ವಧರ್ಮ ನಿರತರೂ, ಪರಧರ್ಮ ಸಹಿಷ್ಣುಗಳೂ ಆಗಿದ್ದರು. ಇಂಥ ಧರ್ಮ ನಿಷ್ಠ ದೊರೆಗಳಿಗೆ ರಾಜಗುರುಗಳಾಗಿದ್ದ ಶ್ರೀ ವಾದಿರಾಜರು ಸೋದೆ ಕ್ಷೇತ್ರವನ್ನು ತಮ್ಮ ಅವತಾರದ ಕಾರ್ಯಕ್ಷೇತ್ರ ಮಾಡಿಕೊಂಡಿದ್ದರು. ಭಾರತದಲ್ಲಿನ ಎಲ್ಲ ತೀರ್ಥಕ್ಷೇತ್ರಗಳನ್ನು ಸುತ್ತಿದ ಶ್ರೀ ವಾದಿರಾಜರಾಜರು ಬರೆದ, ತೀರ್ಥಪ್ರಬಂಧ ಎಂಬ ಗ್ರಂಥವು ಭಾರತದ ಮೊಟ್ಟಮೊದಲ ಪ್ರವಾಸ ಕಥನ, ಇವರ ಭೂಗೋಳ ವರ್ಣನೆ ಗ್ರಂಥವು ಭೂಮಿಯ ವಿಸ್ತೀರ್ಣವನ್ನು ಅತ್ಯಂತ ಕರಾರುವಕ್ಕಾಗಿ ಐವತ್ತೈದು ಕೋಟಿ ಮೈಲುಗಳೆಂದು ಸಾರಿ ಹೇಳಿದ್ದಾರೆ. ವೈಕುಂಠ ವರ್ಣನೆ ಎಂಬ ಗ್ರಂಥವು ಭೂಮಿ ಅಲ್ಲದೇ ಬೇರೆ ಲೋಕಗಳೂ ಇವೆಯೆಂಬುದನ್ನು ಸಾರಿ ಹೇಳುತ್ತಿದೆ.

ಹೀಗೆ ಪ್ರಖ್ಯಾತ ಪಂಡಿತರಾಗಿದ್ದ ಶ್ರೀ ಸೋಂದಾ ವಾದಿರಾಜರು ಅಂದಾಜು ನೂರು ಕೃತಿಗಳನ್ನು ರಚಿಸಿದ್ದಾರೆ. ಇದರೊಟ್ಟಿಗೆ ಇವರ ಅಂದಿನ ಕೀರ್ತನೆಯೊಂದು ಹಾಸ್ಯಮ ಯವಾಗಿರುವುದು ಹಾಗೂ ಅವರ ಜೀವನದ ಆರೇಳು ನೂರು ವರ್ಷದ ನಂತರ ಇಂದಿಗೂ ಕೂಡಾ ಅದು ನಿಜವೆನಿಸಿರುವುದು ನನಗೆ ಆಶ್ಚರ್ಯವನ್ನುಂಟು ಮಾಡಿ ಇದನ್ನು ಬರೆಯಲು ಪ್ರೇರೇಪಿಸಿತು. ಹಾಸ್ಯರಸವು ಸರ್ವಕಾಲಕ್ಕೂ ಸಹ್ಯ ಎಂಬುದು ಖಾತ್ರಿಯಾಗುವುದರ ಜತೆಗೆ ಸಾಮಾನ್ಯ ಮನುಷ್ಯ ಎಲ್ಲ ಕಾಲಕ್ಕೂ ಒಂದೇ ಮನೋಭಾವವನ್ನು ಹೊಂದಿದ್ದ ಕೂಡಾ ಎನಿಸುತ್ತದೆ.

ಸಕಲ ಸಾಧನವೆನಗೆ ಕೈ ಸೇರಿತು,
ಮುಕುತಿ ಸಾಧನಕೆ ತುಸು ಬಾರದ ಧನವು.
ಸಂಸಾರದಲಿ ಜ್ಞಾನ, ಸತಿ ಸುತರಲಿ ಭಕ್ತಿ,
ಕಂಸಾರಿ ಪೂಜೆಯಲಿ ವೈರಾಗ್ಯವು.
ಸಂಶಯದ ಜನರಲಿ ಸಖತನವ ಮಾಡುವೆನು,
ಹಿಂಸೆ ಪಡಿಸುವೆನು ಸುಜನರ ಸಂಘವನು.
ವಿಷಯಂಗಳಲಿ ಧ್ಯಾನ, ಲೌಕಿಕದಲ್ಲಿ ಮನವು,
ವಸುಧೆ ದುರ್ಜನರ ಕಥೆ ಕೇಳುವುದೆ ಶ್ರವಣ.
ಹಸನಾಗಿ ಎಣಿಸುವ ಹಣ ಹೊನ್ನಿನ ಜಪವು,
ಬಿಸಿಲಿನೊಳಗೆ ತಿರುಗುವುದೇ ತಪವು.
ಪೀಠಪೂಜೆಯೆಂಬುದು ಲಾಜ ಚೂರಣವು,
ಮಾಟದ ಪಯೋಧರವೇ ಕಲಶ ಪೂಜೆ.
ಉದರದ ಯಾತ್ರೆಯೇ ಮಹಾಯಾತ್ರೆ,
ಬೂಟಕತನದಲ್ಲಿ ಅನೃತ ಪೇಳ್ವದೇ ಮಂತ್ರ.
ಹೆಂಡತಿಯ ಕೊಂಡಯದ ಮಾತುಗಳೇ ಉಪದೇಶ,
ಚಂಡಕೋಪವೆಂಬುದೇ ನಿತ್ಯ ಅಗ್ನಿ ಹೋತ್ರ.
ಪಂಡಿತನೆನಿಸುವುದೇ ಕುವಿದ್ಯ ಪಠನೆಗಳು,
ಕಂಡಕಂಡಲ್ಲಿ ಎಲ್ಲದಕೂ ವಾದಿಸುವುದೇ ತರ್ಕ.
ಓದುವುದು ಎಲ್ಲಣ್ಣ ಕಲ್ಲಣನೆಂಬುವದು,
ಸ್ವಾಧ್ಯಾಯವೆಂಬುವುದು ಪಗಡಿ ಪಂಜೀ.
ಸಾಧಿಸೀ ಪರಿಯಲ್ಲಿ ಧನವನ್ನು ಕೂಡ್ಹಾಕಿ,
ಮೋದಿಶ್ರೀ ಹಯವದನ ನಾ ನಿನ್ನ ಮರತೆ.

ನೋಡಿದಿರಾ? ಐದಾರು ನೂರು ವರ್ಷದ ಹಿಂದಿನ ಈ ಮಾವನ ಸ್ವಭಾವಗಳ ಚಿತ್ರ ಇಂದಿಗೂ, ಈ ದಿನಕ್ಕೂ ಅನ್ವಯವಾಗುವ ಈ ವಿಡಂಬನೆ ಮನುಷ್ಯ ಸ್ವಭಾವಗಳ ತಿದ್ದುವಿಕೆ ದುಸ್ಸಾಧ್ಯವೆಂಬುದನ್ನು ಹೇಳುತ್ತಿದೆ. ಈಗ ಈ ಕೀರ್ತನೆಯ ಅರ್ಥ ನೋಡೋಣ. ಇಂದು ನಮ್ಮ ಸಾಧನೆಯೆಂದರೆ, ಖರ್ಚಿಗೆ ಹಣ, ಮಕ್ಕಳು, ಸ್ವಂತ ಮನೆ ಮುಗಿಯಿತು. ಕಣ್ಣೆದುರಿಗೆ ಊರೇ ಉರಿದು ಹೋದರೂ ಮನೆಗೆ ಬಂದು ಬಾಗಿಲು ಮುಚ್ಚಿ, ಇವರ ಎದುರಿಗೆ ಕುಳಿತರೆ



ಸಾಕು ಎಂಬುದೇ ಸಾಧನೆ. ಇಂಥದನ್ನೇ ವಾದಿರಾಜರು ಸಾಧಿಸಲು ತುಸು ಬಾರದ ಧನ, ಸಂಪತ್ತು ಎಂದಿದ್ದಾರೆ. ಇನ್ನು ಜ್ಞಾನ, ಭಕ್ತಿ ಗಳಿಸಿ ಎಂದರೆ? ಸಂಸಾರದ್ದೇ ಜ್ಞಾನ, ಸತಿ ಸುತರಿಗಾಗಿಯೇ ಅವರ ಬೇಡಿಕೆ ಈಡೇರಿಸುವಿಕೆಯೇ ಭಕ್ತಿ. ಇನ್ನು ವೈರಾಗ್ಯ, ಕಂಸಾರಿ ಎಂದರೆ ಕೃಷ್ಣ, ದೇವರ ಪೂಜೆಯೇ ಒಲ್ಲೆನಿಸುವುದು ವೈರಾಗ್ಯ. ಸಖತನ ಅಂದರೆ ಸ್ನೇಹ ಯಾರೊಂದಿಗೆ? ಸಜ್ಜನ, ಸದ್ಭಕ್ತರ ಜತೆಗಲ್ಲ, ಸಂಶಯ ಪಿಶಾಚಿಗಳು, ಎಲ್ಲದಕ್ಕೂ ಕೊಕ್ಕೆ ಹಾಕುವವರೊಂದಿಗೇ ಸ್ನೇಹ. ಸಜ್ಜನರು, ಸಾತ್ವಿಕರನ್ನು ಕಂಡರೆ ಅಪಹಾಸ್ಯ ಮಾಡುವದು, ಇನ್ನು ಧ್ಯಾನ? ಸದಾ ಇಂದಿಗೆ ಏನು ತಿನ್ನಲಿ, ನಾಳೆಗೆ ಏನು ತಿನ್ನಲಿ, ಯಾವಾಗ ಮಲಗಲಿ ಎಂಬುದೇ ಧ್ಯಾನ, ಲೌಕಿಕದಲ್ಲಿ ಮನವು ಅಂದರೆ, ಮನಸ್ಸೆಲ್ಲ ಇನ್ನೊಂದು ಸೈಟುಕೊಳ್ಳಲೆ? ಬಂಗಾರದ ರೇಟು ಇಳಿದಿದೆಯಂತೆ ಈಗಲೇ ಕೊಂಡುಕೊಳ್ಳಲೆ? ಎಂಬುದೇ ಸದಾ ಮಥನ ಮನದಲ್ಲಿ. ಇನ್ನು ಕಿವಿಯಿಂದ ಕೇಳುವುದು ಸದಾ ನ್ಯೂಸ್ ಚಾನೆಲ್ ಹಾಕಿ ಭ್ರಷ್ಟ ರಾಜಕಾರಣಿಗಳ ಸಂಪತ್ತಿನ ಗಳಿಕೆ, ಜೈಲುವಾಸದ ಕಥೆಗಳನ್ನು ಕೇಳುವುದೇ ದುರ್ಜನ ಶ್ರವಣ. ಇನ್ನು ಜಪ? ಜಪಮಣಿ ಎಣಿಸುವದಲ್ಲ, ನೋಟುಗಳನ್ನು, ಒಡವೆಗಳನ್ನು ಬೀರುವಿನ ಮುಂದೆ ಕುಳಿತು ಹೊರತೆಗೆದು ಒಂದೊಂದೇ ಎಣಿಸುವುದೇ ಬಹುದೊಡ್ಡ ಜಪವು. ಇನ್ನು ದೇಹ ಕೃಶ ಮಾಡಿಕೊಳ್ಳುವಂಥ ತಪಸ್ಸು ಯಾವುದು? ಬಿಸಿಲಲ್ಲಿ ಹೆಲ್ಮೆಟ್ ಇಲ್ಲದೇ ಗಾಡಿಯ ಮೇಲೆ ತಿರುಗಾಡಿ ಬರುವುದೇ ತಪಸ್ಸು, ಹಸಿವಾದಾಗ ಒಳ್ಳೊಳ್ಳೆ ಹೋಟೆಲ್ ಹುಡುಕುತ್ತಾ ತಿರುಗಾಡುವುದೇ ಉದರ ಯಾತ್ರೆ, ಇನ್ನು ಮಂತ್ರವೋ? ಸದಾ ಸುಳ್ಳು ಹೇಳುವುದೇ ಮಂತ್ರವು. ಇನ್ನು ಉಪದೇಶಗಳನ್ನು ಕೇಳುವುದೆಂದರೆ? ಅದು ಹೆಂಡತಿಯು ಅದನ್ನು ಕೊಂಡು ತಾ, ಇದನ್ನು ಕೊಂಡು ತಾ ಎನ್ನುವುದನ್ನು ಕೇಳಿಸಿಕೊಳ್ಳುವುದೇ ಉಪದೇಶ. ಇನ್ನು ಅಗ್ನಿಹೋತ್ರವೆಂದರೆ? ಚಂಡ ಕೋಪವೇ, ಹಸಿವಾದಾಗ ಅಡಿಗೆ ಬೇಗ ಆಗದಿದ್ದರೆ, ರಾತ್ರಿ ಮುಗಿದರೂ ನಿದ್ದೆ ಬರದಿದ್ದರೆ, ಭರ್ತಿ ಕ್ರಿಕೆಟ್ ನಡೆದಾಗ ಕರೆಂಟ್ ಹೋಗಿ ಆಟ ನೋಡುವುದು ತಪ್ಪಿದಾಗ ಬರುವ ಕೋಪಾಗ್ನಿಯೇ ಅಗ್ನಿಹೋತ್ರ. ಇನ್ನು ಪಾಂಡಿತ್ಯ ಯಾವುದರಲ್ಲಿ? ಶೇರು ಮಾರ್ಕೆಟ್, ಮಟ್ಕಾ ನಂಬರ್ ತೆಗೆಯುವುದು, ಕುದುರೆ ಬಾಲಕ್ಕೆ ಹಣ ಕಟ್ಟುವುದು, ಇಸ್ಪೀಟ್ ರಮ್ಮಿ ಆಟದಲ್ಲಿ ಸೋಲದಿರುವುದೇ ಪಾಂಡಿತ್ಯ. ಇನ್ನು ತರ್ಕಜ್ಞಾನ ಯಾವುದರಲ್ಲಿ? ಯಾರು ಏನು ಹೇಳಿದರೂ ಒಪ್ಪದೇ, ಹಾಗಾಗದೆ ಹೀಗಾದರೆ ಏನು ಮಾಡುತ್ತೀ ಎಂದು ಮಾಡುತ್ತಿರುವ ಅವನನ್ನೂ ಅಂಜಿಸಿ ಸುಮ್ಮನೆ ಕೂಡಿಸುವ ಈ ಕೊಂಕು ತೆಗೆಯುವುದೇ ತರ್ಕಪಾಂಡಿತ್ಯ. ಓದೆಂದರೆ, ಗ್ರಂಥಗಳನ್ನಲ್ಲ, ಏನು ಓದಿದರೆ ನಾನು ಕಷ್ಟಪ ಡದೇ ಹಣಗಳಿಸಿಯೇನು? ಹೇಗೆ ಜನರನ್ನು ಯಾಮಾರಿಸಿ ದುಡ್ಡು ಮಾಡಿಯೇನು? ಕಲ್ಲಣ್ಣ ಯಲ್ಲಣ್ಣನ ಹೆಸರಲ್ಲಿ ಅಕೌಂಟ್ ಮಾಡಿ, ತೆರಿಗೆ ತಪ್ಪಿಸಿಕೊಂಡೇನು? ಇದೇ ಓದು.

ಇವೆಲ್ಲ ಸಚ್ಛಾಸ್ತ್ರಗಳನ್ನು ಕುವಿದ್ಯೆ ಎಂದು ಕರೆಯುತ್ತೇವೆ. ಇದರಿಂದ ನಿಮಗೊಬ್ಬರಿಗೇ ಅಲ್ಲ, ನಿಮ್ಮ ಪೂರ್ವಿಕರಿಗೂ ನರಕ ವಾಸ ತಪ್ಪಿದ್ದಲ್ಲ, ನಿಮ್ಮ ಮುಂದಿನ ಪೀಳಿಗೆಗೂ ಅಂದರೆ, ಮಕ್ಕಳು, ಮೊಮ್ಮಕ್ಕಳಿಗೂ ದಾರಿದ್ರ್ಯ ತಪ್ಪಿದ್ದಲ್ಲ, ಕಂಡವರ ಮೇಲೆಲ್ಲ ನೀವು ಸವಾರಿ ಮಾಡಿದರೆ, ಯಾಮಾರಿ ಹೇಳಿದರೆ ನಿಮ್ಮ ಸಂತಾನಕ್ಕೆ ನೀವೆಷ್ಟು ಸಂಪತ್ತು ಕೂಡಿಟ್ಟರೂ ಅವರು ಅದನ್ನು ಕಳೆದುಕೊಳ್ಳುತ್ತಾರೆ. ಇಂಥವುಗಳನ್ನೇ ಧರ್ಮ ಸೂಕ್ಷ್ಮವೆಂದು ಕರೆಯುತ್ತಾರೆ. ಇವುಗಳನ್ನು ಸಾವಿರಾರು ವರ್ಷಗಳಿಂದಲೂ ಸಂತರು, ಜ್ಞಾನಿಗಳು ಹೇಳುತ್ತಲೇ ಬಂದಿದ್ದರೂ ಅವನ್ನು ಓದದೇ, ಓದಿದವರನ್ನು ಕೇಳಿಸಿಕೊಳ್ಳದೇ ನಾವು ಮತ್ತೇ ದುರ್ಮಾರ್ಗ, ದುರ್ವ್ಯಸನಗಳಿಗೆ ಹೋಗುತ್ತಿರುವುದೇ ದೀಪದ ಬೆಳಕಿಗೆ ಮರುಳಾಗಿ ಅದು ಬೆಳಕಲ್ಲ, ಬೆಂಕಿ ಎಂದು ಅರಿಯದೇ ಎರಗಿ ಸಾಯುವ ಪತಂಗಗಳಂತೆ ಆಗಿದ್ದೇವೆ.

ಡಿ.ವಿ.ಜಿ ಯವರ ಕಗ್ಗದ ಈ ಸಾಲುಗಳಿಗೆ ಸಾವಿಲ್ಲ. 'ವಿಭುದರು ನೀತಿ ನೊರೆದರು ಶತಶತಮಾನಗಳ ಹಿಂದೆ, ಆದರೂ ಜನರಿರ್ಪರು ಹಿಂದಿನ ತೆರದೆ'